ಈ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಈ ಕಾಮಗಾರಿಯು ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು ಬಂದಿದೆ.

ಆ) ಹಾಲಿ ಇರುವ ಬೆಟ್ಟವಪುರದ ಉಪಕೇಂದ್ರದಲ್ಲಿನ ಟ್ರಾನ್ಸ್‌ಫಾರ್ಮರನ ಓ.ಎಲ್.ಟಿ.ಸಿ.ಯು ಕೆಟ್ಟಿದ್ದು ಇದರ ದುರಸ್ತಿಯಾಗಬೇಕಾಗಿದೆ. ಈ ತೊಂದರೆಯನ್ನು ಆದಷ್ಟು ಜಾಗ್ರತೆ ಸರಿಪಡಿಸಲಾಗುವುದು. ಅಲ್ಲದೆ, ಹಾಲಿ ಇರುವ ಟ್ರಾನ್ಸ್‌ಫಾರ್ಮರನ್ನು 8 ಎಂವಿ.ಎ., ಓ.ಎಲ್.ಟಿ.ಸಿ.ಟ್ರಾನ್ಸ್‌ಫಾರ್ಮರ್‌ನಿಂದ ಹಾಗೂ ಹೊಸ ಸ್ವಿಚ್ ಗೇರ್‌ಗಳಿಂದ ಬದಲಾಯಿಸುವುದರ ಬಗ್ಗೆಯೂ ಪರಿಶೀಲಿಸಲು ಸಂಬಂಧಪಟ್ಟ ನಿಗಮದ ಅಧಿಕಾರಿಗಳಿಗೆ ಆದೇಶವನ್ನು ನೀಡಲಾಗಿದೆ.

ಇ) ಹೌದು

ಈ) 'ಟರ್ನ ಕೀ' ಆಧಾರದ ಮೇಲೆ ಗುತ್ತಿಗೆದಾರರನ್ನು ನೇಮಿಸಲು ಆದೇಶ ನೀಡಲಾಗಿದ್ದು ಸದರೀ ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಸೆಪ್ಟೆಂಬರ್ 2000ರಲ್ಲಿ ಪ್ರಾರಂಭಿಸಿ ಸುಮಾರು 8 ರಿಂದ 9 ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ.

ಪಿರಿಯಾಪಟ್ಟಣ ಕ್ಷೇತ್ರಕ್ಕೆ ವಿದ್ಯುತ್ ಸಬ್ ಸ್ಟೇಷನ್

150 (294)

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ಕ್ಷೇತ್ರಕ್ಕೆ ಒಂದು ಸಬ್‌ಸ್ಟೇಶನ್ (66 ಕೆ.ವಿ) ಮಂಜೂರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗಿದೆ?

ಇ) ಇದು ಪೂರ್ಣಗೊಳ್ಳಲು ಇದುವರೆಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಕ್ಟೋಬರ್ 98ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಇ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಈ ಕಾಮಗಾರಿಯ ನಿರ್ವಹಣೆಗಾಗಿ ಗ್ರಾಮೀಣ ವಿದ್ಯುದೀಕರಣ ನಿಗಮವು 218.7 ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿರುತ್ತದೆ.

2) ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ.

3) ''ಟರ್ನ್ ಕೀ'' ಆಧಾರದ ಮೇಲೆ ಗುತ್ತಿಗೆದಾರರನ್ನು ನೇಮಿಸಲು ಆದೇಶ ನೀಡಲಾಗಿದ್ದು, ಸದರಿ ವಿದ್ಯುತ್ ಸಬ್ ಸ್ಟೇಶನ್‌ನ ನಿರ್ಮಾಣ ಕಾರ್ಯವನ್ನು ಸೆಪ್ಟಂಬರ್ 2000 ರಲ್ಲಿ ಪ್ರಾರಂಭಿಸಿ ಸುಮಾರು 8 ರಿಂದ 9 ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ.

ರಾಜ್ಯದಲ್ಲಿ ಹತ್ಯೆಗೀಡಾದ ಶಾಸಕರು.

151 (293)

ಶ್ರೀ ಹೆಚ್.ಸಿ.ಬಸವರಾಜ್ (ಹಿರಿಯಾಪಟ್ಟಣ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ಜನ ಶಾಸಕರುಗಳು ಹತ್ಯೆಗೀಡಾಗಿದ್ದಾರೆ? (ತಹಲ್‌ವರೆಗೆ)

2) ಹತ್ಯೆ ಮಾಡಿದ ಎಷ್ಟು ಜನ ಆರೋಪಿಗಳನ್ನು ಬಂಧಿಸಿ ಅವರಿಗೆ ಶಿಕ್ಷೆ ವಿಧಿಸಲಾಗಿದೆ. ವಿವರಗಳನ್ನು ನೀಡುವುದು.

3) ಶಾಸಕರ ರಕ್ಷಣೆಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):